# 1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು

# ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ

**MVC** 698/2025 **PW**-1

**ದಿಃ27.03.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 1 ಎದುರುದಾರ ಪರ ವಕೀಲರಾದ ಶ್ರೀ ಎಲ್ ಎಚ ಐ ರಿವರಿಂದ.**

ನಾನು 8 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಸದರಿ ಪ್ರಕರಣದ ಪೂರ್ಣ ಮಾಹಿತಿ ನಿಮಗೆ ಇದೇಯಾ ಎಂದರೆ ಸಾಕ್ಷಿ ಇದೆ ಎನ್ನುತ್ತಾರೆ ಹಾಗೂ ಎನೇನು ದಾಖಲೆಗಳನ್ನು ಕೊಟ್ಟಿರುತ್ತೇನೆ ಎಂಬ ಬಗ್ಗೆ ಕೂಡಾ ಮಾಹಿತಿ ಇದೆ. ನಾನು ಯಾವುದೇ ಕೆಲಸ ಮಾಡುವುದಿಲ್ಲ. ಮೃತ ರೇಣವ್ವ ನನ್ನ ತಾಯಿಯಾಗಬೇಕು. ನನ್ನ ತಾಯಿ ಮರಣ ಹೊಂದಿರುತ್ತಾರೆ. ನನ್ನ ಮನೆಯಲ್ಲಿ ನಾನು ಮತ್ತು ನನ್ನ ಅಣ್ಣ ಅಂದರೆ 2 ನೇ ಅರ್ಜಿದಾರರು ಇರುತ್ತೇವೆ. ನನ್ನ ತಂದೆ ಕೂಡಾ ಮರಣ ಹೊಂದಿರುತ್ತಾರೆ. ನನ್ನ ತಾಯಿಗೆ ನಾವಿಬ್ಬರೆ ವಾರಸುದಾರರೆಂದು ತೋರಿಸಲು ನ್ಯಾಯಾಲಯಕ್ಕೆ ವಾರಸಾ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಪಾಳೆ ಗ್ರಾಮದಲ್ಲಿ ನಮ್ಮದು 1 ಎಕರೆ ಹೊಲ ಇದೆ. ಸದರಿ ಹೊಲ ನನ್ನ ಮತ್ತು ನನ್ನ ಅಣ್ಣನ ಹೆಸರಿನಲ್ಲಿದೆ. ಹೊಲದ ಉತಾರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲವೆಂದರೆ ಸರಿ. ಸದರಿ ಹೊಲವನ್ನು ಲಾವಣಿ ಕೊಟ್ಟಿರುತ್ತೇವೆ. ನನ್ನ ತಾಯಿ ಮೃತ ರೇಣವ್ವ ತರಕಾರಿ ಮಾರಾಟ ಮಾಡಲು ಹೋಗುತ್ತಿದ್ದರು. ನನ್ನ ತಾಯಿ ಪಾಳೆ ಗ್ರಾಮದಿಂದ ಹುಬ್ಬಳ್ಳಿಗೆ ಬರಲು ಬಸ್ಸ ಹತ್ತಿ ಬರುತ್ತಿದ್ದರು. ನನ್ನ ತಾಯಿ ಯಾವಾಗ ಮರಣ ಹೊಂದಿದರು ಎಂದು ನನಗೆ ದಿನಾಂಕ ನೆನಪಿರುವುದಿಲ್ಲ. ಪಾಳೆ ಗ್ರಾಮ ಹುಬ್ಬಳ್ಳಿಯಿಂದ ಹಾವೇರಿ-ಬೆಂಗಳೂರಿಗೆ ಹೋಗುವ ರಸ್ತೆಯ ಎಡ ಭಾಗದಲ್ಲಿ ಬರುತ್ತದೆ ಎಂದರೆ ಸರಿ. ನಾವು ಹುಬ್ಬಳ್ಳಿಗೆ ಬರಬೇಕೆಂದರೆ ರಸ್ತೆ ದಾಟಿ ಆ ಕಡೆ ಬರಬೇಕೆಂದರೆ ಸರಿ. ನಮ್ಮ ತಾಯಿಗೆ ಅಪಘಾತವಾಗಿದ್ದನ್ನು ನಾನು ಖುದ್ದಾಗಿ ನೋಡಿಲ್ಲವೆಂದರೆ ಸರಿ. ಆ ನಂತರ ಹೋಗಿದ್ದೆ. ನನ್ನ ತಾಯಿ ಮರಣ ಹೊಂದಿದಾಗ ಎಷ್ಟು ವಯಸ್ಸಾಗಿತ್ತು ಎಂದು ನನಗೆ ಗೊತ್ತಿಲ್ಲ. ನನ್ನ ತಾಯಿ ತರಕಾರಿ ಮಾರಾಟ ಮಾಡುತ್ತಿದ್ದಳು ಎಂದು ಹೇಳಿದ್ದು ಅದೇ ದಿನ ದುಡಿದು ಅದೇ ದಿನ ಲಾಭ ತರಬೇಕೆಂದರೆ ಸರಿ. ಸದರಿ ತರಕಾರಿ ಮಾರಾಟದಿಂದ ನಿಮ್ಮ ತಾಯಿ ಪ್ರತಿನಿತ್ಯ 200-300 ರೂಪಾಯಿ ಆದಾಯ ತರುತ್ತಿದ್ದರು ಎಂದರೆ ಸರಿ. ಅಪಘಾತ ಯಾವುದರಿಂದ ಆಯಿತು ಎಂದರೆ ಸಾಕ್ಷಿ ಮೋಟಾರ ಸೈಕಲ್ ನಿಂದ ಎಂದು ನುಡಿಯುತ್ತಾರೆ. ಸದರಿ ಮೋಟಾರ ಸೈಕಲ್ ಸಂಖ್ಯೆ ನನಗೆ ನೆನಪಿಲ್ಲ.

ನನಗೆ ಅಂಗವಿಕಲತೆ ಇದೆ ಎಂದು ಹೇಳುತ್ತೀರಿ ಎಂದರೆ ಸಾಕ್ಷಿ ಸ್ವಲ್ಪ ಇದೆ ಎನ್ನುತ್ತಾರೆ. ಈ ಬಗ್ಗೆ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. 2 ನೇ ಅರ್ಜಿದಾರರು ಕೂಡಾ ಮನೆಯಲ್ಲಿಯೇ ಇರುತ್ತಾರೆ. ಅವರು ಕೆಲಸ ಮಾಡುವುದಿಲ್ಲವೆ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಸದರಿಯವರು ಅಂದರೆ ನನ್ನ ತಾಯಿ ಬೆಳಿಗ್ಗೆ ಹೋಗಿ ರಾತ್ರಿ 8 ಗಂಟೆಗೆ ಕಾಯಿಪಲ್ಲೆ ಮಾರಾಟ ಮಾಡಿ ಬರುತ್ತಿದ್ದರು. ನನ್ನ ತಾಯಿ ಹೆದ್ದಾರಿಯನ್ನು ಕ್ರಾಸ ಮಾಡಲು ಹೋಗಿ ಅವರ ತಪ್ಪಿನಿಂದಲೆ ಅಪಘಾತವಾಗಿ ಮರಣ ಹೊಂದಿರುತ್ತಾರೆಂದರೆ ಸಾಕ್ಷಿ ಬೈಕನವನು ಬಂದು ನನ್ನ ತಾಯಿಗೆ ಹೊಡಿದಿರುತ್ತಾನೆಂದು ನುಡಿಯುತ್ತಾರೆ. ನನ್ನ ತಾಯಿ ಅಜಾಗರೂಕತೆಯಿಂದ ಅಪಘಾತವಾಗಿ ಮರಣ ಹೊಂದಿರುತ್ತಾಳೆ ಹೊರತು 1 ನೇ ಎದುರುದಾರರ ತಪ್ಪಿನಿಂದ ಅಲ್ಲ ಎಂದರೆ ಸಾಕ್ಷಿ ಅವರು ಹೇಳಿದ್ದು ಸರಿ ಇದೆ ಎನ್ನುತ್ತಾರೆ. ಸದರಿ ಅಪಘಾತ 1 ನೇ ಎದುರುದಾರರ ತಪ್ಪಿನಿಂದ ಆಗಿಲ್ಲ ಆ ಕಾರಣಕ್ಕೆ 1 ನೇ ಎದುರುದಾರರು ಪರಿಹಾರ ಕೊಡಲು ಬಾಧ್ಯಸ್ಥರು ಅಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

1 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ